**O.S.No.20/2019** **PW-1**

<u>ದಿನಾಂಕಃ **29/07/2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ **6**ನೇ ಪ್ರತಿವಾದಿ ಪರವಾಗಿ ಶ್ರೀ ಬಿ ಕೆ ಎಂ ವಕೀಲರಿಂದಃ</u>

5. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ 10 ವರ್ಷಗಳ ಹಳೆಯ ದಾಖಲಾತಿಗಳನ್ನು ನಾನು ನೋಡಿದ್ದೇನೆ. ಅದಕ್ಕಿಂತ ಹಿಂದಿನ ದಾಖಲಾತಿಗಳನ್ನು ನೋಡಲು ನನಗೆ ತೊಂದರೆ ಇರಲಿಲ್ಲ. ಈಗ ತೋರಿಸಲಾದ ದಾಖಲಾತಿಯಲ್ಲಿ ಕಾಣಿಸಿರುವ ಫಜಲ್-ಉರ್-ರೆಹಮಾನ್ ಎಂದರೆ ನನ್ನ ಮಾವ. ಎಸ್.ಕೆ.ಕೃಷ್ಣ ಪ್ರತಿವಾದಿ ನಂ.6 ಎಂದರೆ ಸರಿ ಎಂದು ಸಾಕ್ಷಿದಾರರು ದಿಃ 10-08-2015 ಒಪ್ಪಿದ್ದರಿಂದ ಭೋಗ್ಯ ಪತ್ರವನ್ನು ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ರಲ್ಲಿ ಕಾಣಿಸಲಾಗಿರುವ ಖಾತಾ ನಂ.830ಎ, A.R.No.904 ರಲ್ಲಿರುವ ಪೂರ್ವ ಪಶ್ಚಿಮ 60 ಅಡಿ, ದಕ್ಷಿಣೋತ್ತರ 45 ಅಡಿಗಳ ಪೈಕಿ ಪೂರ್ವ ಪಶ್ಚಿಮ 60, ದಕ್ಷಿಣೋತ್ತರ 24 ಅಡಿಗಳುಳ್ಳ ವಾಸದ ಮನೆ ನನ್ನ ಮಾವ 3ನೇ ಪ್ರತಿವಾದಿಗೆ ಸೇರಿದೆ ಎಂದರೆ ಸರಿಯಲ್ಲ.

6. ನಿಪಿ-3 ರ ಕ್ರಯಪತ್ರವನ್ನು ನಾನು ಹಾಜರುಪಡಿಸಿಲ್ಲ. ನಿಪಿ-3 ರ ಕ್ರಯಪತ್ರವನ್ನು ನಾನು ಓದಿ ತಿಳಿದುಕೊಂಡಿಲ್ಲ. ನಿಪಿ-3ರ ದಾಖಲಾತಿಯನ್ನು ಯಾರು ಯಾರಿಗೆ ಬರೆದುಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ಕ್ರಯದ ಪ್ರತಿಫಲದ ಮೊತ್ತ ನನಗೆ ಗೊತ್ತಿಲ್ಲ. ನಿಪಿ-3 ರ ಕ್ರಯಪತ್ರ ಯಾವ ದಿನಾಂಕದಂದು ನೊಂದಾವಣೆಯಾಗಿದೆ ಎಂದು ತಿಳಿದುಕೊಂಡಿಲ್ಲ. ನಿಪಿ-3 ರ ದಾಖಲಾತಿಯನ್ನು ನಾನು ಹಾಜರುಪಡಿಸಿಲ್ಲ. ನಿಪಿ-3 ರ ದಾಖಲಾತಿಯಲ್ಲಿ ನನ್ನ ಮಾವ ಫಜಲ್-ಉರ್-ರೆಹಮಾನ್ 3ನೇ ಪ್ರತಿವಾದಿ 6ನೇ ಪ್ರತಿವಾದಿ ಕೃಷ್ಣ ಎಸ್.ಕೆ ರವರಿಗೆ ನಿಪಿ-3 ರಂತೆ ಕ್ರಯಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಿಪಿ-3 ರ ಕ್ರಯಪತ್ರದ 2ನೇ ಪುಟದಲ್ಲಿ ದಿಃ 10-08-2015 ರಂದು ರೂ.5 ಲಕ್ಷ ಗಳಿಗೆ ನಮಗೆ ಬೋಗ್ಯ ಮಾಡಿದ್ದು ಸದರಿ ಬೋಗ್ಯದ ಪ್ರತಿಫಲ ರೂ.5 ಲಕ್ಷ ದಿಃ 10-08-2015 ರಂದು ಪಡೆದುಕೊಂಡಿದ್ದು ಉಳಿಕೆ ರೂ.1 ಲಕ್ಷ ಹಣವನ್ನು ಕ್ರಯಪತ್ರ ಬರೆಯುವ ವೇಳೆಯಲ್ಲಿ ನನ್ನ ಮಾವ ಪಡೆದಿದ್ದಾರೆ ಎಂದರೆ ಸರಿಯಲ್ಲ. ನಿಪಿ-3 ರ ಕ್ರಯಪತ್ರದಲ್ಲಿ ನಮೂದಿಸಿರುವ ಚೆಕ್ಕುಬಂದಿ ಹಾಗೂ ವಾದಪತ್ರದಲ್ಲಿ ನಮೂದಿಸಿರುವ ಚೆಕ್ಕುಬಂದಿ ಬೇರೆ ಬೇರೆ ಇರುತ್ತವೆ ಎಂದರೆ ಸರಿಯಲ್ಲ. ನಿಪಿ-3 ರ ಕ್ರಯಪತ್ರದಲ್ಲಿರುವ

ಚೆಕ್ಕುಬಂದಿಯನ್ನು ವಾದಪತ್ರದಲ್ಲಿ ತಿಳಿಸಿರುತ್ತೇನೆ. ಈ ದಾವೆಯನ್ನು ಎಷ್ಟು ಸರ್ವೇ ನಂಬರ್ ಸ್ವತ್ತುಗಳಿಗೆ ಸಂಬಂಧಿಸಿದಂತೆ ದಾವೆ ಮಾಡಲಾಗಿದೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ಮೌನವಾಗಿ ನಿಂತಿರುತ್ತಾರೆ. 3ನೇ ಪ್ರತಿವಾದಿ ಫಜಲ್-ಉರ್-ರೆಹಮಾನ್ ರವರು ಆದಾಯ ಬರುವಂತಹ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಅವರು ಪುರಿಬಟ್ಟಿ ಕೆಲಸ ಮಾಡುತಿದ್ದರು. 3ನೇ ಪ್ರತಿವಾದಿಯವರ ಆರೋಗ್ಯ ಅಷ್ಟು ಚೆನ್ನಾಗಿರಲಿಲ್ಲ ಎಂದರೆ ಸರಿಯಲ್ಲ. ಇಂದಿಗೂ ಸಹ ಅವರು ಅನಾರೋಗ್ಯದಿಂದ ಇರುತ್ತಾರೆ ಎಂದರೆ ಸರಿಯಲ್ಲ. 3ನೇ ಪ್ರತಿವಾದಿಯವರು ಅವರ ಮಕ್ಕಳ ಮದುವೆಯನ್ನು ಸಾಲ ಮಾಡಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. 3ನೇ ಪ್ರತಿವಾದಿಯವರು ಮಕ್ಕಳ ಮದುವೆಗೆ ಮಾಡಿದ ಸಾಲವನ್ನು ತೀರಿಸಲು ಹಾಗೂ ಅವರ ಅನಾರೋಗ್ಯದ ಖರ್ಚಿಗಾಗಿ ನಿಪಿ-3 ರ ಕ್ರಯಪತ್ರವನ್ನು 6ನೇ ಪ್ರತಿವಾದಿಗೆ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. 6ನೇ ಪ್ರತಿವಾದಿಯವರು ನಮ್ಮ ಜಾಗದಲ್ಲಿ ಸ್ವಾದೀನದಲ್ಲಿ ಇರುವ ಕಾರಣ ಅವರನ್ನು ಈ ದಾವೆಯಲ್ಲಿ ಸೇರಿಸಲಾಗಿದೆ. 6ನೇ ಪ್ರತಿವಾದಿಯವರ ವಿರುದ್ಧ ಈ ದಾವೆಯಲ್ಲಿ ಯಾವುದೇ ಪರಿಹಾರ ಕೇಳಿಲ್ಲ. 6ನೇ ಪ್ರತಿವಾದಿಯವರನ್ನು ಈ ದಾವೆಯಿಂದ ವಜಾ ಮಾಡಬಹುದು ಎಂದರೆ ಸರಿಯಲ್ಲ. ಪ್ರತಿವಾದಿಯರು ನಮ್ಮ ಜಾಗದಲ್ಲಿ ಸ್ವಾದೀನ ಇರುವ ಕಾರಣ ಅವರ ವಿರುದ್ಧ ದಾವೆ ವಜಾ ಮಾಡಬಾರದು ಎಂದರು ನುಡಿಯುತ್ತಾರೆ. ನಿಡಿ-1 ರ ಕ್ರಯಪತ್ರದಲ್ಲಿ ಸಾಕ್ಷಿದಾರರಾಗಿ ಸಹಿ ಮಾಡಿರುವ ನಜೀರ್-ಅಹಮದ್ ರವರು ಅವರು ನನ್ನ ಮೊದಲನೇ ಮಾವ ಎಂದರೆ ಸರಿ. ಈಗ ತೋರಿಸಲಾದ ಸಹಿ ನನ್ನ ಮೊದಲನೇ ಮಾವ ನಜೀರ್ ಅಹಮದ್ ರವರದ್ದು ಆಗಿರುತ್ತದೆ ಎಂದರೆ ಸರಿಯಲ್ಲ. ಈಗ ತೋರಿಸಲಾದ ಸಹಿಯು 3ನೇ ಪ್ರತಿವಾದಿಯದ್ದಾಗಿರುತ್ತದೆ ಎಂದರೆ ಸರಿಯಲ್ಲ. 3ನೇ ಪ್ರತಿವಾದಿ ಫಜಲ್-ಉರ್-ರೆಹಮಾನ್ ರವರ ಮಗ ಇಮ್ರಾನ್-ಪಾಶಾ ಎಂದರೆ ಸರಿ. ಈಗ ತೋರಿಸಲಾದ ಸಹಿ ಸದರಿ ಇಮ್ರಾನ್ ಪಾಶಾ ರವರದ್ದು ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಮಾವ ಮಾರಾಟ ಮಾಡಿರುವ 3 ಗುಂಟೆ ಜಮೀನಿನಲ್ಲಿ ½ ಗುಂಟೆ ಜಾಗವನ್ನು ಸರ್ಕಾರದವರು ಭೂಸ್ವಾದೀನಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. 6ನೇ ಪ್ರತಿವಾದಿಯವರು ನನ್ನ ಮಾವ 3ನೇ ಪ್ರತಿವಾದಿಯಿಂದ ಖರೀದಿಸಿರುವ ಸ್ವತ್ತನ್ನು ಅನ್ಯಸಂಕ್ರಮಣ ಮಾಡಿಸಿಕೊಂಡು ನಿವೇಶನವಾಗಿ ಪರಿವರ್ತಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ನಿವೇಶನದಲ್ಲಿ 6ನೇ ಪ್ರತಿವಾದಿಯವರು ಕಟ್ಟಡ ಕಟ್ಟಿಸಿ ಅದರಲ್ಲಿ ಬಾರ್ ನಡೆಸುತಿದ್ದಾರೆ ಎಂದರೆ ಸರಿಯಲ್ಲ. 6ನೇ ಪ್ರತಿವಾದಿಯವರು ಖರೀದಿಸಿರುವ ಜಾಗ ಕೃಷಿ ಭೂಮಿಯಾಗಿ ಉಳಿದಿಲ್ಲ ಅದು ಅನ್ಯಸಕ್ರಮಣವಾಗಿ ಭೂ ಪರಿವರ್ತನೆಯಾಗಿರುತ್ತದೆ ಎಂದರೆ ಸರಿಯಲ್ಲ. ಆದರೂ ಸಹ ದುರುದ್ದೇಶದಿಂದ ಸರ್ವೇ ನಂಬರ್

ಅನ್ನು ನಮೂದಿಸಿರುತ್ತೇವೆ ಎಂದರೆ ಸರಿಯಲ್ಲ. 1996 ನೇ ಸಾಲಿನಲ್ಲಿ ನನ್ನ ಮಾವ ಹಾಗೂ ನನ್ನ ತಾಯಿಯವರ ಕುಟುಂಬದಲ್ಲಿ ಜುಬಾನಿ ಹಿಸ್ಸೆ ಆಗಿರುತ್ತದೆ ಎಂದರೆ ಸರಿಯಲ್ಲ. ಆ ಜುಬಾನಿ ಹಿಸ್ಸೆಯ ಪ್ರಕಾರ ನನ್ನ ತಾಯಿಗೆ ರೂ.1 ಲಕ್ಷ ಹಣವನ್ನು ನೀಡಲಾಗಿದೆ, 2ನೇ ವಾದಿ ಹಾಗೂ 1ನೇ ಪ್ರತಿವಾದಿಗೂ ಸಹ ತಲಾ ರೂ.1 ಲಕ್ಷ ಹಣ ನೀಡಲಾಗಿದೆ ಎಂದರೆ ಸರಿಯಲ್ಲ. ಆ ಜುಬಾನಿ ಹಿಸ್ಸೆಯ ಪ್ರಕಾರ ಕೆ.ಎ.ನಜೀರ್ ಅಹಮ್ಮದ್ ಬಿನ್ ಅಬ್ದುಲ್ ಅಜೀಜ್ ರವರಿಗೆ ಸರ್ವೇ ನಂ.111ಪಿ ರಲ್ಲಿ 15 ಗುಂಟೆ, 112ಪಿ ರಲ್ಲಿ 5 ಗುಂಟೆ, ಫಜಲ್ ಉರ್ ರೆಹಮಾನ್ ರವರಿಗೆ ಸರ್ವೇ ನಂ.111ಪಿ ರಲ್ಲಿ 20 ಗುಂಟೆ, ಮಹಮದ್ ಫಾಜಿಲ್ ರವರಿಗೆ 111ಪಿ ರಲ್ಲಿ 15 ಗುಂಟೆ, 112ಪಿ ರಲ್ಲಿ 5 ಗುಂಟೆ, ಅಬ್ದುಲ್ ರಬ್ ರವರಿಗೆ 111ಪಿ ರಲ್ಲಿ 20 ಗುಂಟೆ ಜಮೀನು ವಿಭಾಗದಲ್ಲಿ ನೀಡಲಾಗಿದೆ ಎಂದರೆ ಸರಿಯಲ್ಲ. ಮೇಲೆ ಹೇಳಿದಂತೆ ನನ್ನ ಮಾವಂದಿರು ಸ್ವತ್ತುಗಳನ್ನು ವಿಭಾಗ ಮಾಡಿಕೊಂಡು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಮೇಲೆ ಹೇಳಿದಂತೆ 3ನೇ ಪ್ರತಿವಾದಿ ತನಗೆ ಬಂದ ಹಿಸ್ಸೆಯಲ್ಲಿ 3 ಗುಂಟೆಯನ್ನು 6ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. 3ನೇ ಪ್ರತಿವಾದಿಯವರು 6ನೇ ಪ್ರತಿವಾದಿಯವರಿಗೆ ಮಾರಾಟ ಮಾಡಿರುವ ಸ್ವತ್ತಿನಲ್ಲಿ ನನಗಾಗಲೀ ಇತರೆ ವಾದಿ ಪ್ರತಿವಾದಿಯರಿಗಾಗಲೀ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

7. ನನ್ನ ತಾಯಿ ದಾಖಲಿಸಿರುವ ವಾದಪತ್ರವನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ಆ ವಾದ ಪತ್ರದಲ್ಲಿರುವ ವಿಷಯಗಳನ್ನು ಮರೆತಿರುತ್ತೇನೆ ಕಾರಣ ಅದನ್ನು 2019 ರಲ್ಲಿ ಸಲ್ಲಿಸಲಾಗಿದೆ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಓದಿ ತಿಳಿದುಕೊಂಡಿಲ್ಲ. ಅದರಲ್ಲಿ ಬರೆದಿರುವ ಸಂಗತಿಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. 6ನೇ ಪ್ರತಿವಾದಿಯರಿಗೆ ಸಂಬಂಧಿಸಿದ ಸ್ವತ್ತನ್ನು ಪಡೆದುಕೊಳ್ಳುವ ಉದ್ದೇಶದಿಂದ ಈ ಸುಳ್ಳು ದಾವೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಹಾಗೂ ನನ್ನ ಚಿಕ್ಕಮ್ಮಂದಿರಿಗಾಗಲೀ ನನಗಾಗಲೀ 6ನೇ ಪ್ರತಿವಾದಿಗೆ ಮಾರಾಟ ಮಾಡಿರುವ ಸ್ವತ್ತಿನಲ್ಲಿ ಹಿಸ್ಸೆಯ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು 6ನೇ ಪ್ರತಿವಾದಿಗೆ ಯಾವುದೇ ಸ್ವತ್ತು ಮಾರಾಟ ಮಾಡಿಲ್ಲ ಎಂದು ನುಡಿಯುತ್ತಾರೆ. ನಮ್ಮ ತಾಯಿಯ ಪರವಾಗಿ ನಾನು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u>

ಇತರೆ ಪ್ರತಿವಾದಿಯರು ಹಾಗೂ ವಕೀಲರು ಗೈರು ಹಾಜರು ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಸಹಿ/-

(ನಾಗೇಶ ಮೂರ್ತಿ ಬಿ.ಕೆ)

ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅರಕಲಗೂಡು